**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ: 352/2022**

ಪಿಡಬ್ಲ್ಯೂ: 01

ಸಿಡಬ್ಲ್ಯೂ: 01

| | | |
|---|---|---|
| ಹೆಸರು | : | ಈರಪ್ಪ ಶಿವಪ್ಪ ರಾಮಗೊಂಡನಹಳ್ಳಿ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಅಂಗರಗಟ್ಟಿ |

ದಿನಾಂಕ : 31.01.2025 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

1 ನೇ ಆರೋಪಿತನು ನಮ್ಮ ಜಾಗೆಯನ್ನು ಅತೀಕ್ರಮಣ ಮಾಡಿ ಶೌಚಾಲಯದ ಗುಂಡಿಯನು ಒಡೆಯುತ್ತಿದ್ದಾಗ ನಾನು ಕಸ ಒಗೆಯಲು ಹೋದಾಗ ನಾನು ದಿನಾಂಕಃ 26.01.2022 ರಂದು ಬೆಳಿಗ್ಗೆ 10.00 ಗಂಟೆಗೆ ಪ್ರಶ್ನೆಮಾಡಿದಾಗ ಬೊಸಡಿಕೆ ಇದು ನಿಮ್ಮ ಅಪ್ಪನ ಜಾಗ ಅಂತಾ ಬೈದು, ದೂಡಾದಿ ಗುದ್ದಲಿಯಿಂದ 1 ನೇ ಆರೋಪಿತನು ತಲೆಗೆ ಹೊಡೆದನು. ಉಳಿದ 2 ರಿಂದ 5 ನೇ ಆರೋಪಿತರು ಬಡಿಗೆಯಿಂದ ಹೊಡೆದರು. 4 ಮತ್ತು 5 ನೇ ಆರೋಪಿತರು ಕೈಯಿಂದ ಹೊಡೆದರು. ಆಗ ಚಾಸಾ-04, 05 ಮತ್ತು 08 ರವರು ಜಗಳ ಬಿಡಿಸಿದರು. ನಂತರ ನನ್ನನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲಿಸಿದರು. ನಂತರ ಪೊಲೀಸರು ಬಂದು ನನ್ನ ಹೇಳಿಕೆಯನ್ನು ಬರೆದುಕೊಂಡರು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ದೂರನ್ನು ನಿಪಿ-01 ಎಂದು, ಸಾಕ್ಷಿ ಸಹಿಯನ್ನು ನಿಪಿ-01(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ನಿಪಿ-02 ಮತ್ತು 03

ಎಂದು ಗುರುತಿಸಲಾಯಿತು. ಆರೋಪಿತರು ಇದು ನಿಮ್ಮ ಅಪ್ಪನ ಜಾಗ ಅಲ್ಲಾ, ಇನ್ನೊಮ್ಮೆ ಕಾಲು ಇಟ್ಟರೆ ಜೀವ ಸಹಿತ ಬಿಡುವುದಿಲ್ಲಾ ಅಂತಾ ಹೇಳಿರುತ್ತಾರೆ. ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಗುದ್ದಲಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ-01 ಎಂದು ಗುರುತಿಸಲಾಯಿತು.

(ಮಾನ್ಯ ಎಪಿಪಿಯವರ ವಿನಂತಿ ಮೇರೆಗೆ ಈ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದ ಮೇರೆಗೆ ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲು : ಮಾನ್ಯ ಎಪಿಪಿ ಯವರಿಂದ :**

ಆರೋಪಿತರು ಗುಂಪುಕಟ್ಟಿಕೊಂಡು ಕೆ ಕೆ ಹೊಡೆಯುತ್ತಾ ಕೈಯಲ್ಲಿ ಗುದ್ದಲಿ ಹಿಡಿದು ನಮ್ಮ ಜಾಗಕ್ಕೆ ಬಂದರು ಎಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಪಾಟೀ ಸವಾಲು ಮಾಡಲು 3.00 ಗಂಟೆಗೆ ಕಾಲಾವಕಾಶ ಕೋರಿದ್ದರಿಂದ ಆದೇಶಿಸಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಜೆಎಂಎಫ್‌ಸಿ, ಬ್ಯಾಡಗಿ.